'ಓಹ್... ಅದು ನನ್ನ ಸೊಸಿ ದನಿ... ಆಕೀನ್ನ ಸಾಯಿಸಿತಿರೇನು? ಓಹ್, ಜೀಸಸ್... ನಾ ಈಗ ಏನ್ ಮಾಡ್ಲಿ? ಏಯ್ ಮಿಸ್‌ಫಿಟ್, ನನ್ನ ಬಿಟ್ಟಬಿಡೋ... ನನ್ನ ಕೊಲ್ಲಬ್ಯಾಡ. ನನ್ನ ಕಡೆ ಏನು ದುಡ್ಡು ಐತೆಲ್ಲ, ಅದನ್ನೆಲ್ಲ ಕೊಡತೇನಿ...'

'ಹೆಣ ಶೃಂಗಾರ ಮಾಡಾಂವಗ ಯಾರಾದರೂ ಭಕ್ಷೀಸು ಕೊಡತಾರೇನು...'

ಢಂ.. ಢಂ... ಕಾಡಿನ ಕಡೆಯಿಂದ ಹೃದಯವನ್ನು ಸೀಳುವಂತಹ ಗುಂಡಿನ ಶಬ್ದ ಕೇಳಿಬಂದವು. 'ಅಯ್ಯೋ ಮಗನೆ, ಅಯ್ಯೋ ನನ್ನ ಸೊಸೆಯೇ, ಅಯ್ಯೋ ಮೊಮ್ಮಕ್ಕಳೇ, ನಾನೇ ನಿಮ್ಮನ್ನು ಕೊಂದಂಗಾಯ್ತಲ್ಲ...' ಮುದುಕಿ ಚೀರಿದಳು. ಅವಳ ತಲೆ ತಿರುಗುತ್ತಿತ್ತು. ಆಕೆ ಕಂದಕದಲ್ಲಿ ಕುಸಿದು ಕೂತಳು.

'ಸತ್ತವರನ್ನು ಬದುಕಿಸಿದವನು ಏಸು ಮಾತ್ರ. ಅದನ್ನು ಆತ ಮಾಡಬಾರದಾಗಿತ್ತೇನೋ. ಜೀಸಸ್ ಇದ್ದ ಕಾಲಕ್ಕ ನಾನು ಇದ್ದಿದ್ರೆ ಹೀಂಗ ಇರ್ತಿರಲಿಲ್ಲ ಅನಿಸ್ತದ.' ಮಿಸ್‌ಫಿಟ್ ತುಸು ಬಗ್ಗಿ ನೆಲ ಮುಟ್ಟಿದ. ತನ್ನ ಹತ್ತಿರವೆ ಬಂದಿದ್ದ ಅವನ ಮುಖದಲ್ಲಿ ಇದುವರೆಗೂ ಇಲ್ಲದ ದೈನ್ಯತೆ ಮುದುಕಿಗೆ ಕಂಡಂತಾಯಿತು. 'ನೀನೂ ನನ್ನ ಮಕ್ಕಳಲ್ಲಿ ಒಬ್ಬಾಂವ. ಮಿಸ್‌ಫಿಟ್ ನೀನೂ ನನ್ನ ಮಗ. ಏಯ್ ಮಿಸ್‌ಫಿಟ್ ನೀ ನನ್ನ ಮಗಾ ಕಣೋ... ನೋಡಿಲ್ಲಿ... ನೀ ಅಪರಾಧಿ ಅಲ್ಲ, ನನ್ನ ನಂಬು. ತಾಯಿ ಹೇಳಿದಂಗ ಮಗ ಕೇಳಬೇಕು...' ಅಜ್ಜಿ ಅವನ ಹೆಗಲು ಸವರಿದಳು. ತನ್ನನ್ನು ಸರ್ಪವೊಂದು ಸವರಿತೇನೋ ಎಂದು ಆತ ಬದಗ್ಗನೆ ಹಿಂದಕ್ಕೆ ಸರಿದು ಅವಳೆದೆಗೆ ಸರಸರನೆ ಮೂರು ಗುಂಡು ಹಾರಿಸಿದ.

## ಫ್ಲ್ಯಾನರಿ ಓ'ಕಾನರ್

ಅಮೆರಿಕದ ಪ್ರತಿಭಾಶಾಲಿ ಲೇಖಕಿ ಫ್ಲ್ಯಾನರಿ ಓ'ಕಾನರ್ 1964ರಲ್ಲಿ ತೀರಿಕೊಂಡಾಗ ಅವಳಿಗಿನ್ನೂ 39ರ ಹರೆಯ. ಸೃಜನಶೀಲತೆಯ ಉತ್ತುಂಗವನ್ನು ಏರುತ್ತಿದ್ದಾಗ ಚರ್ಮಕ್ಷಯ ರೋಗಕ್ಕೆ ಆಕೆ ಬಲಿಯಾದಳು. 'ಏ ಗುಡ್ ಮ್ಯಾನ್ ಇಜ್ ಹಾರ್ಡ್ ಟು ಫೈಂಡ್', 'ಎವರಿಥಿಂಗ್ ದ್ಯಾಟ್ ರೈಜಸ್ ಮಸ್ಟ್ ಕನವರ್ಜ್' ಮುಂತಾದ ಕೃತಿಗಳಿಂದ ಕಥನ ಪ್ರಕಾರದ ಮೇಲೆ ಆಕೆ ಅಗಾಧ ಪ್ರಭಾವ ಬೀರಿದ್ದಾಳೆ. ಅವಳ ಹೆಸರಿನಲ್ಲಿರುವ ಕಥಾಪ್ರಶಸ್ತಿಯನ್ನು ಅಮೆರಿಕೆಯ ಉತ್ತಮ ಕಥೆಗಾರರಿಗೆ ನೀಡಲಾಗಿದೆ. ಬಹುಜನಾಂಗೀಯ–ಬಹುಧರ್ಮೀಯ ಸಮಾಜದಲ್ಲಿರುವ ತಲ್ಲಣ, ಸಂಶಯಗಳಿಗೆ ಆಕೆ ಅಭಿವ್ಯಕ್ತಿಯಾದಳು. ಕೌಟುಂಬಿಕ ವಿಘಟನೆ, ಬಂದೂಕು ಸಂಸ್ಕೃತಿ ಹಾಗೂ ಮನಸ್ಸಿನಲ್ಲಿ ಮನೆ ಮಾಡಿರುವ ಕ್ರೌರ್ಯಗಳನ್ನು ಆಕೆ ತನ್ನ ಕತೆಗಳಲ್ಲಿ ಅನಾವರಣಗೊಳಿದ್ದಾಳೆ.

## ಬಸು ಬೇವಿನಗಿಡದ

ಲೇಖಕರು ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಮುನವಳ್ಳಿಯವರು. 'ತಾಯವ್ವ', 'ಬಾಳೆಯ ಕಂಬ', 'ಹೊಡಿ ಚಕ್ಕಡಿ' ಹಾಗೂ 'ಉಗುಳುಬುಟ್ಟಿ' ಕಥಾಸಂಗ್ರಹಗಳು. 'ಸ್ವಾತಂತ್ರ್ಯ ಚಳವಳಿ ಹಾಗೂ ಭಾರತೀಯ ಮುಸ್ಲಿಮರು', 'ಸಮಕಾಲೀನ ಭಾರತೀಯ ಸಣ್ಣಕತೆಗಳು', 'ಕಮಲಾದೇವಿ ಚಟ್ಟೋಪಾಧ್ಯಾಯ', 'ಹಸಿರು ಕಾಡಿನ ಗೆಳೆಯರು', 'ಅಪರಾಜಿತೆ– ಸಾಮರಸೆಟ್ ಮಾಮ್ ಕತೆಗಳು' ಅವರ ಅನುವಾದ ಪುಸ್ತಕಗಳು. ಪ್ರಸ್ತುತ ಧಾರವಾಡ ಆಕಾಶವಾಣಿಯಲ್ಲಿ ಕಾರ್ಯಕ್ರಮ ಅಧಿಕಾರಿಯಾಗಿದ್ದಾರೆ.